

12
ಕೈಗಳಿಲ್ಲದೆ ನಾನು ತರ್ಪಣ ನೀಡುವುದು ಹೇಗೆ ? ಆದರೆ, ಧರ್ಮದೇವತೆಯೇ ನನ್ನ ಅಣ್ಣನ ಮೂಲಕ ಮಾತನಾಡುತ್ತಿದ್ದಾಳೆ ಎನ್ನಬೇಕು. ಅಣ್ಣನ ಮಾತನ್ನು ಪೂರೈಸುವ ಹೊಣೆ ಆಕೆಯದು. ನಾನೇಕೆ ಚಿಂತಿಸಲಿ ?
13
ಬಾಹುದಾ ನದಿಯ ತೀರದಲ್ಲಿ ನಿಂತು ಲಿಖಿತನು ದೇವ, ಋಷಿ, ಪಿತೃಗಳಿಗೆ ತರ್ಪಣ ನೀಡಲು ಮುಂದಾದ. ಅಷ್ಟರಲ್ಲಿ..
ಎಂಥ ಆಶ್ಚರ್ಯ! ನನ್ನ ಕೈಗಳು ಮರಳಿ ಬಂದವು ! ನನ್ನ ಅಣ್ಣನ ಆಶೀರ್ವಾದದಿಂದಲೇ ಈ ಅದ್ಭುತ ಸಂಗತಿ ನಡೆಯಿತು. ನಾನೀಗ ದೇವ, ಋಷಿ, ಪಿತೃಗಳಿಗೆ ತರ್ಪಣ ನೀಡುತ್ತೇನೆ.
14
ತಮ್ಮನಿಗೆ ಕೈಗಳು ಮರಳಿ ಬಂದ ಸಂಗತಿ ತಿಳಿದು ಶಂಖನಿಗೆ ತುಂಬಾ ಆನಂದವಾಯಿತು. ಅವನು ಅಂಥ ಅದ್ಭುತ ನಡೆಯಲೆಂದೇ ನಿರಂತರ ಪ್ರಾರ್ಥಿಸುತ್ತಿದ್ದ.
15
ಅಣ್ಣಾ, ಒಂದು ಪ್ರಶ್ನೆ. ನನಗೆ ನೀನೇ ಶಿಕ್ಷೆ ನೀಡಬಹುದಾಗಿತ್ತು. ಹಾಗೆ ಮಾಡದೆ, ರಾಜನ ಬಳಿಗೆ ಏಕೆ ನನ್ನನ್ನು ಕಳುಹಿಸಿದೆ?
ತಮ್ಮ, ಹಾಗೆ ಮಾಡುವುದು ಸರಿಯಲ್ಲ. ಶಿಕ್ಷೆ ನೀಡುವುದು ರಾಜನ ಕರ್ತವ್ಯ. ನಾನು ಅದೇ ಶಿಕ್ಷೆಯನ್ನು ನಿನಗೆ ನೀಡಿದ್ದರೂ, ತಮ್ಮನಾದ್ದರಿಂದ ನಿನಗೆ ಕಡಿಮೆ ಶಿಕ್ಷೆ ವಿಧಿಸಿದೆ ಎಂದು ಜನ ತಿಳಿದುಕೊಳ್ಳುವರು. ಇದು ತಪ್ಪು ತೀರ್ಮಾನ ನೀಡಿದಂತಾಗುವುದು. ಧರ್ಮವನ್ನು ಸಂರಕ್ಷಿಸುವುದರಲ್ಲಿ ನೀನು ದೊಡ್ಡ ಪಾತ್ರವನ್ನು ವಹಿಸಿದ್ದೀಯಾ. ನಿನಗೇನು ವರ ಬೇಕೋ ಕೇಳು.
ಅಣ್ಣಾ, ನಿನ್ನಂಥ ಧರ್ಮಾತ್ಮನ ತಮ್ಮನಾಗಿರುವುದಕ್ಕಿಂತ ಹೆಚ್ಚಿನ ಭಾಗ್ಯ ಇನ್ನೇನಿದೆ ಹೇಳು? ಇದಕ್ಕಿಂತ ಹೆಚ್ಚಿನದು ನನಗೆ ಇನ್ನೇನು ಬೇಕು?